KAVP400000812024

RAVINDRAKUMAR KATTIMANI

JUDGEMENT
Digitally signed by RAVINDRAKUMAR KATTIMANI
Location: Senior Civil Judge and JMFC Muddebihal
Date: 2026.06.06 12:58:44 +0530

Presented on : 09-02-2024
Registered on : 09-02-2024
Decided on : 02-06-2026
Duration : 2 years, 3 months, 22 days

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ**

**ಉಪಸ್ಥಿತರು:- ಶ್ರೀ ರವೀಂದ್ರಕುಮಾರ ಬಿ.ಕಟ್ಟಿಮನಿ,**
**ಬಿ.ಎ.ಎಲ್ಎಲ್.ಬಿ (ಸ್ಪೆ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,

**ಸಿ.ಸಿ ನಂ.22/2024**

**ಇಂದು ದಿನಾಂಕ 2 ನೇ ಜೂನ್-2026**

**ದೂರುದಾರರು:** ಸರಕಾರದ ಪರವಾಗಿ
ಅಬಕಾರಿ ಉಪನಿರೀಕ್ಷಕರು, ಮುದ್ದೆಬಿಹಾಳ ವಲಯ,
ಮುದ್ದೇಬಿಹಾಳ.

(ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

**ಆರೋಪಿ** : ಕಾಶೀರಾಮ ತಂದೆ ಠಾಕಪ್ಪ ಪವಾರ,
ವಯಾಃ 46 ವರ್ಷ, ಉದ್ಯೋಗಃ ಕೂಲಿ,
ಸಾ/ಕೊಪ್ಪ ತಾಂಡಾ, ತಾಃಮುದ್ದೇಬಿಹಾಳ.

(ಶ್ರೀ ಕೆ.ಎಚ್.ಚವಾಣ, ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 16-10-2023 |
| ಅಪರಾಧ ವರದಿಯಾದ ದಿನಾಂಕ | : | 16-10-2023 |

| | | |
|---|---|---|
| ಆರೋಪಿತನ ಬಂಧನದ ದಿನಾಂಕ | : | --- |
| ಫಿರ್ಯಾದಿದಾರನ ಹೆಸರು | : | ಶ್ರೀ ಮಲ್ಲಪ್ಪ ಬಸಪ್ಪ ಹೊಸಮನಿ, ಅಬಕಾರಿ ಉಪನಿರೀಕ್ಷಕರು, ಮುದ್ದೇಬಿಹಾಳ |
| ಸಾಕ್ಷಿಯ ವಿಚಾರಣೆ ಪ್ರಾರಂಭವಾದ ದಿನಾಂಕ | : | 15-01-2025 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 10-04-2026 |
| ಅಪಾದಿಸಿದ ಕಲಂ.ಗಳು | : | ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32, ಮತ್ತು ಭಾ.ದಂ.ಸಂ.ಕಲಂಃ273 |
| ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿತನನ್ನು ಬಿಡುಗಡೆ ಮಾಡಲಾಗಿದೆ |

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಮುದ್ದೇಬಿಹಾಳ.

## : **ತೀರ್ಪು** :

**1.** ಅಬಕಾರಿ ಉಪನಿರೀಕ್ಷಕರು, ಮುದ್ದೇಬಿಹಾಳ ವಲಯ ಇವರು ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾನೆ ಎಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆಃ**

ದಿನಾಂಕ 16-10-2023 ರಂದು ಮುಂಜಾನೆ 8-45 ಗಂಟೆ ಸುಮಾರಿಗೆ ಮುದ್ದೇಬಿಹಾಳ ತಾಲೂಕಿನ ಕೊಪ್ಪ ತಾಂಡಾದ ಆರೋಪಿಯ ಮನೆಯ ಮೇಲೆ, ಅಬಕಾರಿ ಉಪನಿರೀಕ್ಷಕರು, ಮುದ್ದೇಬಿಹಾಳ ವಲಯ, ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ದಾಳಿ ಮಾಡಿದಾಗ ಆರೋಪಿತನು 5 ಲೀಟರ್ ಸಾಮರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸರಾಯಿಯನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿಟ್ಟುಕೊಂಡಿರುತ್ತಾನೆಂದು ತನಿಖೆಯಿಂದ ದೃಢಪಟ್ಟಿದ್ದರಿಂದ

ಅಬಕಾರಿ ಉಪ-ನಿರೀಕ್ಷಕರು, ಮುದ್ದೇಬಿಹಾಳ ವಲಯ ಇವರು ಆರೋಪಿತನ ವಿರುದ್ಧ ಅಬಕಾರಿ ಕಾಯ್ದೆ ಕಲಂಃ32 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿತನ ವಿರುದ್ದ ದಂಡ ಪ್ರಕ್ರಿಯಾ ಸಂಹಿತೆ ಕಲಂ.190ರ ಪ್ರಕಾರ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

**4.** ಆರೋಪಿತನು ನ್ಯಾಯಾಲಯದಿಂದ ಜಾಮೀನು ಪಡೆದಕೊಂಡಿರುತ್ತಾನೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಪ್ರಕಾರ ಆರೋಪಿತನಿಗೆ ದೋಷಾರೋಪಣಾಪಟ್ಟಿ ಹಾಗೂ ಇತರ ದಾಖಲೆಗಳ ನಕಲುಗಳನ್ನು ಒದಗಿಸಲಾಯಿತು.

**5.** ದೋಷಾರೋಪಣೆಯನ್ನು ರಚಿಸುವುದಕ್ಕಿಂತ ಮೊದಲು ಆರೋಪಿತನ ಪರ ವಕೀಲರ ವಾದವನ್ನು ಕೇಳಲಾಯಿತು. ನಂತರ ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು ಭಾರತೀಯ ದಂಡ ಸಂಹಿತೆ ಕಲಂಃ273 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಓದಿ ಹೇಳಲಾಗಿ, ಆರೋಪಿತನು ತಾನು ಯಾವುದೇ ತಪ್ಪು ಮಾಡಿಲ್ಲ, ಸಾಕ್ಷಿ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾನೆ.

**6.** ಆರೋಪಿತನ ವಿರುದ್ಧ ಆಪಾದಿಸಲಾದ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜನೆಯವರು ತಮ್ಮ ಪರವಾಗಿ ಒಟ್ಟು 5 ಸಾಕ್ಷಿದಾರರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ 8 ದಾಖಲೆಗಳನ್ನು ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ಒಂದು ಸ್ಯಾಂಪಲ್ ಕಳ್ಳಭಟ್ಟಿ ಸರಾಯಿ ಬಾಟಲಿಯನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಗಿದೆ.

**7.** ದಂ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತನು ತನ್ನ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾನೆ ಮತ್ತು ತನ್ನ ಪರವಾಗಿ ಯಾವುದೇ ಸಾಕ್ಷ್ಯಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

**8.** ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತನ ಪರ ಶ್ರೀ.ಕೆ.ಎ.ಚವಾಣ, ವಕೀಲರ ವಾದವನ್ನು ಆಲಿಸಲಾಗಿದೆ.

**9.** ಈ ಪ್ರಕರಣದ ನಿರ್ಣಯಕ್ಕೆ ಈ ಕೆಳಕಂಡ ಅಂಶಗಳು ನನ್ನ ಪರಿಗಣೆಗೆ ಉದ್ಭವಿಸಿರುತ್ತವೆಃ-

1. ದಿನಾಂಕಃ16-10-2023 ರಂದು ಮುಂಜಾನೆ 8-45 ಗಂಟೆಗೆ ಮುದ್ದೇಬಿಹಾಳ ತಾಲೂಕಿನ, ಕೊಪ್ಪ ತಾಂಡಾದ ಮನೆಯಲ್ಲಿ, ಆರೋಪಿತನು ಅಕ್ರಮವಾಗಿ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ಇಟ್ಟುಕೊಂಡಿರುತ್ತಾನೆ, ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾದ ಎಸಗಿದ್ದಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ ?

2. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಅಪರಾಧ ಮಾಡುವ ಮನೋಭಾವನೆಯಿಂದ ಮಾನವನ ಸೇವನೆಗೆ ಯೋಗ್ಯವಲ್ಲದ ಹಾಗೂ ಹಾನಿಕಾರಕಗೊಳಿಸಲಾದ ಸ್ಥಿತಿಯಲ್ಲಿರುವ ಕಳ್ಳಭಟ್ಟಿ ಸಾರಾಯಿಯನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಇಟ್ಟುಕೊಂಡಿರುತ್ತಾನೆ, ಆದ್ದರಿಂದ ಭಾ.ದಂ.ಸಂ. ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ ?

3. ಯಾವ ಆದೇಶ ?

**10.** ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ನಕಾರಾತ್ಮಕವಾಗಿ,

ಅಂಶ ನಂ.2 : ನಕಾರಾತ್ಮಕವಾಗಿ.

ಅಂಶ ನಂ.3 : ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ,

## : ಕಾರಣಗಳು :

**11. ಅಂಶ ನಂ.1 ಮತ್ತು 2:-** ಅಭಿಯೋಜನೆಯವರು ಆರೋಪಿತನ ವಿರುದ್ದ ಆಪಾದಿಸಲಾದ ಆಪಾದನೆಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಒಟ್ಟು 5 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ-1 ಇವರು ಈ ಕೇಸಿನ ಫಿರ್ಯಾದಿದಾರರು ಇರುತ್ತಾರೆ. ಅವರು ದಾಳಿ ಮಾಡಿದ ಬಗ್ಗೆ ಹಾಗೂ ಮುದ್ದೆ ಮಾಲುಗಳನ್ನು ಜಪ್ತಿ ಮಾಡಿದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-4 ಅಬಕಾರಿ ಪೇದೆ ಇದ್ದು, ಸದರಿಯವರು ಪ್ರಾಸಾ-1 ರವರ ಜೊತೆ ದಾಳಿಯಲ್ಲಿ ಭಾಗಿಯಾದ ಬಗ್ಗೆ ಮತ್ತು ಜಪ್ತಾದ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿ ರಾಸಾಯನಿಕ ವರದಿ ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-5 ರವರು ಈ ಕೇಸಿನ ತನಿಖಾಧಿಕಾರಿಗಳು ಇದ್ದು ತನಿಖೆ ಕೈಗೊಂಡ ಕುರಿತು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-2 ಮತ್ತು 3 ಇವರು ಈ ಪ್ರಕರಣದ ಜಪ್ತಿ ಪಂಚನಾಮೆಯ ಪಂಚರಿದ್ದು, ಅವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯವರು ಮೌಖಿಕ ಸಾಕ್ಷ್ಯಗಳಿಗೆ ಪೂರಕವಾಗಿ ಒಟ್ಟು 8 ದಾಖಲಾತಿಗಳನ್ನು ನಿ.ಪಿ.1 ರಿಂದ ನಿ.ಪಿ.8 ಹಾಗೂ ಒಂದು ಸ್ಯಾಂಪಲ್ ಬಾಟಲಿಯನ್ನು ಮುದ್ದೆ ಮಾಲು-1 ಎಂದು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1-ಶೋಧನಾ ಸಮೂಚಿತ ವರದಿ, ನಿಪಿ-2-ಮಾದರಿ ಶೀಲಿನ ನಕಲು, ನಿಪಿ-3-ಪಂಚನಾಮೆ, ನಿಪಿ-4-ದೂರು, ನಿಪಿ-5-ಪ್ರಥಮ ವರ್ತಮಾನ ವರದಿ, ನಿಪಿ-6-ಜಪ್ತಾದ ಮುದ್ದೆ ಮಾಲನ್ನು ತಾಬಾದಲ್ಲಿಟ್ಟುಕೊಳ್ಳಲು ನೀಡಿದ ಪರವಾನಿಗೆ ಪತ್ರ, ನಿಪಿ-7- ಜಪ್ತಾದ ಮುದ್ದೆಮಾಲುಗಳ ಬಗ್ಗೆ ರಾಸಾಯನಿಕ ವರದಿ ನೀಡಲು ಸಹಾಯಕ ರಸಾಯನ ಪರೀವಿಕ್ಷಕರು, ಧಾರವಾಡ ಇವರಿಗೆ ಬರೆದ ಪತ್ರ, ನಿಪಿ-8-ರಾಸಾಯನಿಕ ಪರೀಕ್ಷಾ ವರದಿ ಮತ್ತು ಸಹಾಯಕ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಚಾಸಾ-4 ಮತ್ತು 6 ಇವರನ್ನು ವಿಚಾರಣೆಯಿಂದ ಕೈಬಿಡಲಾಗಿದೆ.

**12.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಈ ಪ್ರಕರಣದಲ್ಲಿ ದಾಳಿ ಮಾಡಿದ ಫಿರ್ಯಾದಿದಾರರಾದ ಪ್ರಾಸಾ-1-ಅಬಕಾರಿ ಉಪ ನಿರೀಕ್ಷಕರು, ಅವರ ಸಿಬ್ಬಂದಿಗಳಾದ ಪ್ರಾಸಾ-4 ರವರು ಕೂಡಿಕೊಂಡು ದಾಳಿ ಮಾಡಿದ್ದರ ಬಗ್ಗೆ ಹಾಗೂ ಮುದ್ದೆಮಾಲುಗಳನ್ನು ವಶಪಡಿಸಿಕೊಂಡ ಬಗ್ಗೆ ಹಾಗೂ ಪಂಚನಾಮೆ ಮಾಡಿದ ಬಗ್ಗೆ ಮತ್ತು ಆ ಬಗ್ಗೆ ತನಿಖೆ ಕೈಗೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಪ್ರಾಸಾ-1

ರವರು ಪಾಟೀ ಸವಾಲಿನಲ್ಲಿ ಹೇಳಿದ್ದೇನೆಂದರೆ, ಮುದ್ದೇಬಿಹಾಳ, ಹುಲ್ಲೂರ, ಕೊಪ್ಪ ತಾಂಡಾದ ಮಾರ್ಗವಾಗಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಮ್ಮ ಸಮವಸ್ತ ನೋಡಿ 8-10 ಸ್ಥಳೀಯ ಜನರು ಸೇರಿದ್ದರು. ಸ್ಥಳಿಯ ಜನರು ಹೇಳಿಕೆ ನೀಡಲು ನಿರಾಕಾರಿಸಿರುತ್ತಾರೆ. ಖುಲ್ಲಾ ಜಾಗಾ ಆರೋಪಿಗೆ ಸೇರಿದ್ದು ಎಂದು ತೋರಿಸಲು ಗ್ರಾಮ ಪಂಚಾಯತಿ ವತಿಯಿಂದ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ-4-ಅಬಕಾರಿ ಪೇದೆ ಇವರು ಪ್ರಾಸಾ-1 ರವರ ಜೊತೆ ದಾಳಿಯಲ್ಲಿ ಭಾಗಿಯಾದ ಸಾಕ್ಷಿದಾರರು ಇರುತ್ತಾರೆ ಅವರು ಅಭಿಯೋಜನ ಪ್ರಕರಣಕ್ಕೆ ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ಆದರೆ ಪ್ರಾಸಾ-4 ರವರು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ನುಡಿದಿರುವುದೇನೆಂದರೆ, ಚಾಸಾ-1 ರವರು ತಮ್ಮ ಮೇಲಾಧಿಕಾರಿಗಳು ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಪ್ರಾಸಾ-4 ರವರ ಸಾಕ್ಷ್ಯವು ಅಭಿಯೋಜನ ಪ್ರಕರಣಕ್ಕೆ ಯಾವದೇ ರೀತಿಯಿಂದಲೂ ಬೆಂಬಲಿಸಿದ ಸಾಕ್ಷ್ಯವಾಗಿ ಕಂಡುಬರುವುದಿಲ್ಲ.

**14.** ಪ್ರಾಸಾ-1-ಫಿರ್ಯಾದಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ಸದರಿಯವರ ಸಾಕ್ಷ್ಯದಲ್ಲಿ ಸ್ವಲ್ಪ ಹೊಂದಾಣಿಯಿಂದ ಕೂಡಿದ್ದರೂ ಸಹ ಕೆಲವು ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆ ಮಾಡಿ ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಬಹುದಿತ್ತು. ಏಕೆಂದರೆ ಘಟನಾ ಸ್ಥಳದಲ್ಲಿ ಸುಮಾರು ಜನರು ಸೇರಿದ್ದರು ಎಂಬ ಅಂಶಗಳನ್ನು ಪ್ರಾಸಾ-1 ರವರು ಒಪ್ಪಿಕೊಂಡಿದ್ದು, ಘಟನಾ ಸ್ಥಳದಲ್ಲಿ ಸೇರಿದ ಜನರ ಹೇಳಿಕೆಗಳನ್ನು ನೀಡಲು ನಿರಾಕರಿಸಿರುತ್ತಾರೆ ಅಂತಾ ಹೇಳಿರುವ ಅಂಶಗಳನ್ನು ಪರಿಶೀಲಿಸಿದಾಗ, ಪ್ರಾಸಾ-1 ರವರು ಘಟನಾ ಸ್ಥಳದಲ್ಲಿ ಸೇರಿದ ಜನರ ಹೇಳಿಕೆಗಳನ್ನು ಪಡೆಯಲು ಸ್ವಲ್ಪ ಪ್ರಮಾಣದ ಪ್ರಯತ್ನ ಮಾಡಬಹುದಿತ್ತು. ಆದರೆ ಪ್ರಾಸಾ-1 ರವರು ಆ ರೀತಿಯ ಯಾವದೇ ಪ್ರಯತ್ನ ಮಾಡದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಿ ಸದರಿ ಪ್ರಕರಣವು ಸಂಶಯದಿಂದ ಕೂಡಿರುವುದು ಕಂಡುಬರುತ್ತದೆ. ಅದು ಅಲ್ಲದೇ ಪ್ರಾಸಾ-1 ರವರು ಪಾಟೀ ಸವಾಲಿನಲ್ಲಿ, ಘಟನಾ ಸ್ಥಳವು ಆರೋಪಿಗೆ ಸೇರಿದ್ದು ಎಂಬ ಬಗ್ಗೆ ಯಾವದೇ ದಾಖಲೆಯನ್ನು ಸಹ ತಾನು ನೋಡಿರುವುದಿಲ್ಲ ಅಂತಾ ಹೇಳಿರುವುದು ಸಹ, ಸದರಿಯವರ ಸಾಕ್ಷ್ಯವು ಅಭಿಯೋಜನ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಪರಿಣಮಿಸಿರುತ್ತದೆ. ಅದು ಅಲ್ಲದೇ ಮುದ್ದೇಬಿಹಾಳ,

ಹುಲ್ಲೂರು, ಕೊಪ್ಪ ತಾಂಡಾದ ಮಾರ್ಗವಾಗಿ ಸಾಕಷ್ಟು ವಾಹನಗಳು ಓಡಾಡುತ್ತವೆ ಅಂತಾ ಹೇಳಿರುವ ಅಂಶವನ್ನು ಗಮನಿಸಿದಾಗ, ಸದರಿ ವಾಹನಗಳ ಚಾಲಕರ ಅಥವಾ ಮೋಟಾರ ಸೈಕಲ್ ಸವಾರರನ್ನಾದರೂ ಸ್ವತಂತ್ರ ಸಾಕ್ಷಿದಾರರನ್ನಾಗಿ ಈ ಪ್ರಕರಣದಲ್ಲಿ ಸೇರಿಸುವ ಪ್ರಯತ್ನವನ್ನು ಫ್ರಾಸಾ-1 ರವರು ಮಾಡಬಹುದಿತ್ತು. ಹೀಗಾಪಿ ಸದರಿ ಪ್ರಕರಣವು ಸಂಶಯಕ್ಕೆ ಎಡೆ ಮಾಡಿಕೊಟ್ಟಂತಾಗಿರುತ್ತದೆ. ಅದು ಅಲ್ಲದೇ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಗೆ ಸಂಬಂಧಿಸಿದ ಮನೆಯ ಉತಾರೆಯಾಗಲೀ ಅಥವಾ ಆರೋಪಿ ರೇಷನ್ ಕಾರ್ಡ ಹಾಗೂ ಆಧಾರ ಕಾರ್ಡವಾಗಲಿ ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಅದು ಅಲ್ಲದೇ ಫ್ರಾಸಾ-1 ರವರು ಆರೋಪಿಯ ಖುಲ್ಲಾ ಜಾಗೆಯ ಉತಾರೆಯನ್ನು ಸಹ ನೋಡಿರುವುದಿಲ್ಲ ಅಂತಾ ಹೇಳಿರುವುದು ಸತ್ಯಕ್ಕೆ ದೂರವಾದದ್ದು, ಏಕೆಂದರೆ ಆರೋಪಿತನೇ ಸದರಿ ದಿನದಂದು ಕಳ್ಳಭಟ್ಟಿ ಸರಾಯಿಯನ್ನು ಮಾಡುತ್ತಿದ್ದನು ಅಂತಾ ಹೇಳಿರುವುದು ಸಂಶಯಕ್ಕೆ ಎಡೆ ಮಾಡಿ ಕೊಡುತ್ತದೆ. ಹೀಗಾಗಿ ಆರೋಪಿತನು ಅಬಕಾರಿ ಇಲಾಖೆಯು ಅಪಾದಿಸಿದಂತೆ ಕಳ್ಳಭಟ್ಟಿ ಸರಾಯಿ ವ್ಯವಹಾರ ಮಾಡುತ್ತಿದ್ದನು ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಹೀಗಾಗಿ ಸದರಿ ಅಂಶಗಳು ಪ್ರಕರಣಕ್ಕೆ ಹಿನ್ನಡೆಯಾಗಿ ಪರಿಣಮಿಸಿರುತ್ತದೆ. ಆದ್ದರಿಂದ ಫ್ರಾಸಾ-1 ಮತ್ತು 4 ರವರ ಹೇಳಿಕೆಗಳು ಒಂದಕ್ಕೊಂದು ತದ್ವಿರುದ್ದವಾದ ಹೇಳಿಕೆಗಳಾಗಿರುತ್ತವೆ. ಆದ್ದರಿಂದ ಸದರಿ ಅಂಶವು ಕೂಡಾ ಸಂಶಯಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಹೀಗಾಗಿ ಸದರಿ ಅಂಶಗಳು ಅಭಿಯೋಜನೆ ಪ್ರಕರಣಕ್ಕೆ ವಿರುದ್ಧವಾಗಿ ಪರಿಣಮಿಸಿರುತ್ತವೆ. ಕಾರಣ ಸದರಿ ದಿನದಂದು ಘಟನೆ ಸಂಭವಿಸಿತ್ತೆ ಎಂಬ ಸಂಶಯ ಉಂಟಾಗುತ್ತದೆ. ಆದ್ದರಿಂದ ಫ್ರಾಸಾ-1 ಹಾಗೂ ಫ್ರಾಸಾ-4 ರವರು ಗುನ್ನೆ ಸ್ಥಳಕ್ಕೆ ಹೋಗಿರುತ್ತಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಹಾಗೂ ಗುನ್ನೆ ಸ್ಥಳದಿಂದ ಅಕ್ರಮವಾಗಿ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತಿ ಮಾಡಿರುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ ಹಾಗೂ ಅಭಿಯೋಜನೆಯವರು ಆಪಾದಿಸಲಾದ ಆರೋಪಗಳನ್ನು ಆರೋಪಿತನು ಮಾಡಿರುತ್ತಾನೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಸಂದೇಹ ಉಂಟಾಗುತ್ತದೆ. ಈ ಪ್ರಕರಣದಲ್ಲಿ ಜಪ್ತಿ ಮಾಡಿದ ಮುದ್ದೆ ಮಾಲುಗಳನ್ನು ಆರೋಪಿತನು ಎಲ್ಲಿಂದ ತೆಗೆದುಕೊಂಡು ಬಂದನು ಎಂಬ ಬಗ್ಗೆ ತನಿಖಾಧಿಕಾರಿಯು ವಿಚಾರಣೆ ಮಾಡಿರುವುದಿಲ್ಲ.

**15.** ಪ್ರಾಸಾ-4 ಇವರು ಈ ಪ್ರಕರಣದಲ್ಲಿ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋದ ಸಾಕ್ಷಿದಾರರಿರುತ್ತಾರೆ. ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ01.11.2023 ರಂದು ಜಪ್ತಾದ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿ, ದಿನಾಂಕಃ06.11.2023 ರಂದು ರಾಸಾಯನಿಕ ವರದಿಯನ್ನು ಮತ್ತು ಮಾದರಿಗಳನ್ನು ಪಡೆದುಕೊಂಡು ಬಂದು ಚಾಸಾ-7 ರವರಿಗೆ ಒಪ್ಪಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**16.** ಈ ಕೇಸಿನ ತನಿಖಾಧಿಕಾರಿಗಳಾದ ಪ್ರಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು, ದಿನಾಂಕಃ01.11.2023 ರಂದು ಪ್ರಕರಣದಲ್ಲಿ ಕಾಯ್ದಿರಿಸಿದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರಾಸಾ-5 ರವರ ಮೂಲಕ ಕಳುಹಿಸಿ, ದಿನಾಂಕಃ04.11.2023 ರಂದು ಪ್ರಾಸಾ-5 ರವರಿಂದ ರಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದು, ಪ್ರಕರಣದಲ್ಲಿ ಅಳವಡಿಸಿ, ಪ್ರಾಸಾ-5 ರವರ ಹೇಳಿಕೆ ಪಡೆದು, ದಿನಾಂಕಃ08.11.2023 ರಂದು ಆರೋಪಿತನ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾಗಿದ್ದು, ದಸ್ತಗಿರ ಕ್ರಮ ಅಳವಡಿಸಿಕೊಂಡು ಆರೋಪಿತನನ್ನು ಬಿಡುಗಡೆ ಮಾಡಿ, ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**17.** ಈ ಪ್ರಕರಣದಲ್ಲಿ ಪ್ರಾಸಾ-5 ರವರು ಜಪ್ತಿ ಮಾಡಿದ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ದಿನಾಂಕ 01.11.2023 ರಂದು ಕಳುಹಿಸಿರುತ್ತಾರೆ ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ನುಡಿದಿರುತ್ತಾರೆ. ಅಪರಾಧ ಘಟಿಸಿದೆ ಎಂದು ಹೇಳಲಾದ ದಿನಾಂಕ 16.10.2023 ಆಗಿದ್ದು ಅಪರಾಧ ಘಟಸಿದ ದಿನಾಂಕದಿಂದ ಸುಮಾರು 15 ದಿವಸಗಳ ವಿಳಂಬಮಾಡಿ ಈ ಪ್ರಕರಣದ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತಾರೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು **Criminal Appeal No.**1880 **of** 2011 **dated** 16.08.2018 **in between Mohan Lal V/s State of Punjab** ರಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಮದ್ಯ ಅಥವಾ ಕಳ್ಳಭಟ್ಟಿ ಸರಾಯಿಯನ್ನು ವಶಪಡಿಸಿಕೊಂಡ 72 ಗಂಟೆ ಒಳಗಾಗಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಬೇಕಾಗಿರುತ್ತದೆ

ಎಂದು ಇರುತ್ತದೆ. ಆದರೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲನ್ನು 72 ಗಂಟೆ ಒಳಗಾಗಿ ರಾಸಾಯನಿಕ ಪರಿಶೀಕ್ಷೆಗೆ ಕಳುಹಿಸದೆ ಇರುವುದು ಅಭಿಯೋಜನೆಯ ಪ್ರಕಾರಣಕ್ಕೆ ಭಾದಕತೆ ಉಂಟಾಗುತ್ತದೆ.

**18.** ಈ ಕೇಸಿನ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-2 ಮತ್ತು 3 ರವರು ಜಪ್ತಿ ಪಂಚನಾಮೆಯ ಪಂಚರು ಇದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ಸದರಿ ದಾಖಲೆಗೆ ಮುದ್ದೇಬಿಹಾಳದ ಅಂಬೇಡ್ಕರ ಸರ್ಕಲದಲ್ಲಿ ಅಬಕಾರಿ ಅಧಿಕಾರಿಗಳು ಸಹಿ ಪಡೆದುಕೊಂಡಿರುತ್ತಾರೆ. ಮತ್ತು ಮುಮಾ-1 ನ್ನು ಎಲ್ಲಿ, ಯಾವಾಗ, ಯಾವ ಕಾರಣಕ್ಕೆ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-2 ಮತ್ತು 3 ರವರನ್ನು ಅಭಿಯೋಜನೆ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ಅಭಿಯೋಜನೆ ಪ್ರಕರಣಕ್ಕೆ ಯಾವುದೇ ಪೂರಕ ಸಾಕ್ಷ್ಯಗಳನ್ನು ಅವರಿಂದ ಹೊರತಗೆಯಲು ವಿಫಲರಾಗಿರುತ್ತಾರೆ. ಪ್ರಾಸಾ-2 ಮತ್ತು 3 ರವರ ಸಾಕ್ಷ್ಯವು ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತ ಸಾಕ್ಷ್ಯವನ್ನು ನುಡಿದಿರುತ್ತಾರೆ ಹಾಗೂ ಅವರ ಸಾಕ್ಷ್ಯವು ನಂಬಲು ಅರ್ಹವಿರುವುದಿಲ್ಲ.

**19.** ಈ ಪ್ರಕರಣದಲ್ಲಿ ಪ್ರಮುಖ, ಪ್ರತ್ಯಕ್ಷ ಮತ್ತು ಪಂಚ ಸಾಕ್ಷಿದಾರರಾದ ಪ್ರಾಸಾ-2 ಮತ್ತು 3 ಇವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಬಕಾರಿ ಪ್ರಕರಣಗಳಲ್ಲಿ ಜಪ್ತಿ ಪಂಚನಾಮೆಯನ್ನು ರುಜುವಾತುಪಡಿಸುವುದು ತುಂಬ ಅವಶ್ಯಕ ಹಾಗೂ ಪ್ರಮುಖ ಆಗಿರುತ್ತದೆ ಮತ್ತು ಜಪ್ತಿ ಮಾಡಿಕೊಂಡ ಮುದ್ದೆ ಮಾಲುಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವುದು ಅಭಿಯೋಜನೆಯವರ ಹೊಣೆಯಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಪ್ರಾಸಾ-2 ಮತ್ತು 3 ಪಂಚ ಸಾಕ್ಷಿದಾರರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸದೇ ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ. ಆದ್ದರಿಂದ, ಫಿರ್ಯಾದಿದಾರ ಪ್ರಾಸಾ-1 ರವರು ಗುನ್ನಾ ಸ್ಥಳದಿಂದ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತಿ ಪಂಚನಾಮೆ ಮೂಲಕ ವಶಪಡಿಸಿಕೊಂಡಿರುತ್ತಾರೆ ಅಥವಾ ಇಲ್ಲವೋ ಎನ್ನುವ ಬಗ್ಗೆ ಸಂಶಯ ಉಂಟಾಗುತ್ತದೆ. ಈ ಪ್ರಕರಣದಲ್ಲಿ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5

ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಆರೋಪಿತನ ವಶದಿಂದ ಜಪ್ತಿ ಮಾಡಿಕೊಂಡಿರುವುದಾಗಿ ತನಿಖಾಧಿಕಾರಿ ಪ್ರಾಸಾ-1 ರವರು ಹೇಳಿದ್ದರೂ ಸಹಃ ಸ್ವತಂತ್ರ ಮತ್ತು ಪಂಚ ಸಾಕ್ಷಿದಾರರರಾದ ಪ್ರಾಸಾ-2 ಮತ್ತು 3 ರವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ಸಮಕ್ಷಮ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಗುನ್ನೆ ಸ್ಥಳದಿಂದ ಜಪ್ತಿ ಮಾಡಿಕೊಂಡಿಲ್ಲ ಎಂದು ಹೇಳಿರುತ್ತಾರೆ. **AIR 2011 SC 73 Varun Choudhary V/s State of Rajasthan** ರ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಲ್ಲಿ ಹೇಳಲಾದ ತತ್ವದ ಮೇರೆಗೆ ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸುವಲ್ಲಿ ಪ್ರತ್ಯಕ್ಷ ಮತ್ತು ಜಪ್ತಿ ಪಂಚನಾಮೆ ಪಂಚರು ಅಭಿಯೋಜನೆ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನೀಡಬೇಕಾಗುತ್ತದೆ. ಅಬಕಾರಿ ದಾಳಿಯಲ್ಲಿ ಭಾಗಿಯಾದ ಪಂಚರು ಪ್ರಾಸಾ-2 ಮತ್ತು 3 ರವರು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸುವ ಹೊಣೆ ಅಭಿಯೋಜನೆಯವರ ಮೇಲೆ ಇರುತ್ತದೆ. ಆದ್ದರಿಂದ ಜಪ್ತಿ ಪಂಚನಾಮೆ ನಿಪಿ-3 ಕಾನೂನು ಮಾನ್ಯತೆಯನ್ನು ಕಳೆದುಕೊಂಡಂತ್ತಾಗುತ್ತದೆ. ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸಲು ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆಯವರು ಆರೋಪಿತನ ವಶದಿಂದ 5 ಲೀಟರ್ ಸಾಮಾರ್ಥ್ಯದ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನಿನಲ್ಲಿ 5 ಲೀಟರನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತಿ ಮಾಡಿರುತ್ತಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಆದ್ದರಿಂದ ಈ ಪ್ರಕರಣದ ಆರೋಪಿತನನ್ನು ದೋಷಿ ಎಂದು ನಿರ್ಣಯಿಸಲು ಯಾವುದೇ ಪೂರಕ ಮತ್ತು ಬಲವಾದ ಸಾಕ್ಷಾಧಾರಗಳು ಇರುವುದಿಲ್ಲ. ಆದ್ದರಿಂದ ಅಭಿಯೋಜನೆಯವರು ಆರೋಪಿತನ ವಿರುದ್ಧ ಆಪಾದಿಸಲಾದ ಆಪಾದನೆಯನ್ನು ಸಂಶಾಯತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದ್ದರಿಂದ, ಆರೋಪಿತನು ಅಪರಾಧ ಮಾಡಿರುತ್ತಾನೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ, ಆರೋಪಿತನನ್ನು ಆಪಾದನೆಯಿಂದ ಬಿಡುಗಡೆಗೊಳಿಸುವುದು ನ್ಯಾಯಸಮ್ಮತವೆಂದು ಅಭಿಪ್ರಾಯಪಟ್ಟು, **ಅಂಶ-1 ಮತ್ತು 2 ಕ್ಕೆ ನಕಾರಾತ್ಮಕವಾಗಿ** ಉತ್ತರಿಸಿದೆ.

**20. ಅಂಶ ನಂ:3**- ಈ ಮೇಲೆ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**: ಆದೇಶ :**

**ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಕಾರ್ಯನಿರ್ವಹಿಸುತ್ತಾ, ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು ಭಾರತೀಯ ದಂಡ ಸಂಹಿತೆ ಕಲಂ.273 ರಡಿಯಲ್ಲಿನ ಆಪಾದನೆಗಳಿಂದ ಬಿಡುಗಡೆ ಮಾಡಲಾಗಿದೆ.**

**ಆರೋಪಿತನ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆ 6 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.**

**ಮು.ಮಾ.1/ಕಳ್ಳಭಟ್ಟಿ ಸರಾಯಿ ತುಂಬಿದ ಒಂದು ಸ್ಯಾಂಪಲ್ ಬಾಟಲಿ ಮೌಲ್ಯ ರಹಿತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನನ್ನಿಂದ ಸೂಕ್ತವಾದ ತಿದ್ದುಪಡಿಯಾದ ನಂತರ ಸಹಿ ಮಾಡಿ ತೀರ್ಪನ್ನು ದಿನಾಂಕ **02.06.2026** ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಘೋಷಿಸಲಾಯಿತು)

**(ರವೀಂದ್ರಕುಮಾರ ಬಿ.ಕಟ್ಟಿಮನಿ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಮುದ್ದೇಬಿಹಾಳ.

: **ಅನುಬಂಧ** :

**ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ:**

| | | |
|---|---|---|
| ಪ್ರಾಸಾ-1 | : | ಮಲ್ಲಪ್ಪ ಬಸಪ್ಪ ಹೊಸಮನಿ, ಅಬಕಾರಿ ಉಪ ನಿರೀಕ್ಷಕರು |
| ಪ್ರಾಸಾ-2 | : | ಪಾಂಡಪ್ಪ ದಂಜಪ್ಪ ಲಮಾಣಿ, |
| ಪ್ರಾಸಾ-3 | : | ಹಣಮಂತ ಶಿವಾಜಿ ಲಮಾಣಿ, |
| ಪ್ರಾಸಾ-4 | : | ಸಿದ್ರಾಮ ರಾವುತಪ್ಪ ಕುಟಬತಳ್ಳಿ, ಅಬಕಾರಿ ಪೇದೆ, |
| ಪ್ರಾಸಾ-5 | : | ಭೀರಪ್ಪ ಸದಾಶಿವ ನಾಗಠಾಣ, ಅಬಕಾರಿ ಉಪನಿರೀಕ್ಷಕರು, |

**ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳಪಟ್ಟಿಃ**

| | | |
|---|---|---|
| ನಿಪಿ-1 | : | ಶೋಧನಾ ಸಮೂಚಿತ ವರದಿ, |
| ನಿಪಿ-2 | : | ಮಾದರಿ ಶೀಲಿನ ನಕಲು, |
| ನಿಪಿ-3 | : | ಪಂಚನಾಮೆ, |
| ನಿಪಿ-4 | : | ದೂರು, |
| ನಿಪಿ-5 | : | ಪ್ರಥಮ ವರ್ತಮಾನ ವರದಿ, |
| ನಿಪಿ-6 | : | ಜಾಪ್ತಾದ ಮುಮಾ.ಗಳನ್ನು ತಾಬಾದಲ್ಲಿಟ್ಟುಕೊಳ್ಳಲು ನೀಡಿದ ಪರವಾನಿಗೆ ಪತ್ರ |
| ನಿಪಿ-7 | : | ರಾಸಾಯನಿಕ ಪ್ರಯೋಗಾಲಯಕ್ಕೆ ಬರೆದ ಪತ್ರ, |
| ನಿಪಿ-8 | : | ರಾಸಾಯನಿಕ ವಿಶ್ಲೇಷಣಾ ವರದಿ |

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ**

ಮು.ಮಾ.1 : ಕಳ್ಳಭಟ್ಟಿ ಸರಾಯಿ ತುಂಬಿದ ಒಂದು ಸ್ಯಾಂಪಲ್ ಬಾಟಲಿ.

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ**

-ಇಲ್ಲ-

**ಆರೋಪಿ ಪರ ಗುರುತಿಸಲಾದ ದಾಖಲೆಗಳಪಟ್ಟಿಃ**

-ಇಲ್ಲ-

RAVINDRAKUMAR KATTIMANI

JUDGEMENT
Digitally signed by RAVINDRAKUMAR KATTIMANI
Location: Senior Civil Judge and JMFC Muddebihal
Date: 2026.06.06 12:58:57 +0530

**(ರವೀಂದ್ರಕುಮಾರ ಬಿ.ಕಟ್ಟಿಮನಿ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ., ಮುದ್ದೇಬಿಹಾಳ.**